# ಜಂಪ್‌ಸೂಟ್ ಗೆಟಪ್!



**ದಿನದ ಸಾಮಾನ್ಯ ನೋಟದಿಂದ ಹಿಡಿದು ವಿಶೇಷ ಸಂದರ್ಭಗಳಲ್ಲೂ ಹೊಂದಿಕೊಳ್ಳುವ ಗುಣ ಜಂಪ್ ಸೂಟ್‌ನದು. ಕಾಲೇಜು ಯುವತಿಯರಿಗೆ ಹೇಳಿ ಮಾಡಿಸಿದಂತಹ ಉಡುಪಿದು.**

**■ ವಿದ್ಯಾಶ್ರೀ ಎಸ್.**

ಫ್ಯಾಷನ್ ಕ್ಷೇತ್ರ ಮನಸ್ಸುಗಳ ನಾಡಿಮಿಡಿತದ ಜಾಡು ಹಿಡಿದು ಮಗ್ಗಲನ್ನು ಬದಲಿಸುತ್ತಲೇ ಇರುತ್ತದೆ. ಇಂದು ಹಳತು ಎನಿಸಿಕೊಳ್ಳುವುದು ಸ್ವಲ್ಪ ದಿನಗಳಲ್ಲಿಯೇ ಹೊಸ ರೂಪು ಪಡೆಯುತ್ತದೆ. ಈ ಸಾಲಿನಲ್ಲಿ ಜಂಪ್ ಸೂಟಿನ ಪರ್ಯಾಯವಾದ ಪ್ಲೇ ಸೂಟುಗಳು ಮುಂಚೂಣಿಯಲ್ಲಿವೆ.

ಜಂಪ್‌ಸೂಟ್‌ನಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ ಆಗಿರುವ ಸೃಜನಾತ್ಮಕ ವಿನ್ಯಾಸಗಳು ಯುವತಿಯರ ಮನ ಗೆದ್ದಿದೆ. ಒಂದು ಕಾಲದಲ್ಲಿ ಬೇಸಿಗೆ ಉಡುಪು ಎಂದು ಚಳಿ, ಮಳೆಗಾಲದಲ್ಲಿ ಪಕ್ಕಕ್ಕೆ ಸರಿಸುತ್ತಿದ್ದವರು ಇದರ ಬದಲಾವಣೆಯ ಮೋಡಿಗೆ ಒಳಗಾಗಿದ್ದಾರೆ.

ಪಾಶ್ಚಾತ್ಯರ ಕೊಡುಗೆಯಾಗಿರುವ ಈ ವಿನ್ಯಾಸ ಫ್ಯಾಷನ್ ಲೋಕದಲ್ಲಿ ಝುಗಮಗಿಸುತ್ತಲೇ ವೈವಿಧ್ಯತೆಗೆ ತೆರೆದುಕೊಳ್ಳುತ್ತಿದೆ. ವಿದೇಶಿ ವಿನ್ಯಾಸದ ಉಡುಪಾಗಿದ್ದರೂ, ಇದು ನಮ್ಮ ದೇಶಕ್ಕೆ ಲಗ್ಗೆ ಇಡಲು ಹೆಚ್ಚು ಸಮಯ ಹಿಡಿಯಲಿಲ್ಲ. 1930ರಲ್ಲಿ ನ್ಯೂಯಾರ್ಕ್‌ನಲ್ಲಿ ಪ್ಲೇ ಸೂಟ್ ಮೊದಲ ಬಾರಿಗೆ ಆವಿಷ್ಕಾರಗೊಂಡಿತು. ಧರಿಸಲು ಆರಾಮದಾಯಕವಾಗಿರುವ ಇದನ್ನು ಕ್ರೀಡಾಪಟುಗಳು ಹೆಚ್ಚು ತೊಡುತ್ತಿದ್ದರು. 1970ರ ನಂತರ ಇದು ಫ್ಯಾಷನ್ ಕ್ಷೇತ್ರದಲ್ಲಿ ಭದ್ರವಾದ ಸ್ಥಾನ ಗಿಟ್ಟಿಸಿಕೊಂಡಿತು. ಈ ಉಡುಪು ತೊಟ್ಟ ರೂಪದರ್ಶಿಗಳು ಝುಗಮಗಿಸುವ ವೇದಿಕೆ ಮೇಲೆ ಬೆಕ್ಕಿನ ನಡಿಗೆ ನಡೆಯುತ್ತಿದ್ದಂತೆ ಇದರ ಜನಪ್ರಿಯತೆ ಗರಿಗೆದರಿತು.

ಇದರಲ್ಲಿ ವಿವಿಧ ವಿನ್ಯಾಸಗಳು ಸೃಷ್ಟಿಯಾದ ತರುವಾಯ ಕಾಲೇಜು, ಕಚೇರಿ, ಪಿಕ್ನಿಕ್, ಪಾರ್ಟಿ... ಹೀಗೆ ದಿನದ ಸಾಮಾನ್ಯ ನೋಟದಿಂದ ಹಿಡಿದು ವಿಶೇಷ ಸಂದರ್ಭಗಳಲ್ಲೂ ಹೊಂದಿಕೊಳ್ಳುವ ಗುಣ ಪಡೆದುಕೊಂಡಿತು. ಕಾಲೇಜು ಯುವತಿಯರಿಗೆ ಹೇಳಿ ಮಾಡಿಸಿದಂತಹ ಉಡುಪಿದು.

ನೋಡಲು ಜಂಪ್ ಸೂಟ್ ಮಾದರಿಯಲ್ಲಿಯೇ